interest of Scheduled Castes/Sheduled Tribes, Backward Classes with the direct source of Article 309 instead of enacting an Act under 309. ಅದಕ್ಕಿಂತ ಹೆಚ್ಚಾಗಿ ಇದರಲ್ಲಿ ಅಧಿಕಾರ ಶಾಹಿಯನ್ನು ಬೆಳಸಲಿಕ್ಕೆ ಅವಕಾಶ ಇಲ್ಲ. ಎಲ್ಲಾ ಹಕ್ಕುಗಳನ್ನು ನಮಗೆ ಸಂವಿಧಾನ ಕೊಡುತ್ತದೆ. ಸಂವಿಧಾನ ಕೊಡತಕ್ಕ ಹಕ್ಕಿನ ಸಂಪೂರ್ಣ ಪ್ರಭಾವ ಮಸೂದೆಯಲ್ಲಿ ಬರುತ್ತದೆಂದು ಗ್ಯಾರಂಟಿ ಇಲ್ಲ. ಇದನ್ನು ಪ್ರೊ: ನಂಜುಂಡಸ್ವಾಮಿಯವರು ಒಪ್ಪುತ್ತಾರೆಂದು ಭಾವನೆ. He would agree with me that some times it will get diluted. To that extent, your Act may be disabled or Government may be disabled from acting. Ultimately, it is the wisdom of the legislature that prevails.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಇದರಲ್ಲಿ ಆ ಶಕ್ತಿ ಇಲ್ಲವೆಂದು ಹೇಳಬೇಕು. ಇಂಥ ಸೆಕ್ಷನ್‌ನಲ್ಲಿ ಇಲ್ಲವೆಂದು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಇಲ್ಲಿ ಆಕ್ಟಿನ ಪ್ರಶ್ನೆ ಇಲ್ಲ. As it is, a particular regulation or rules of Government can derive the strength directly from the Constitution. We feel that is much better than deriving a strength by enacting an Act under the provision of the Constitution. This is the philosophy. ಇದನ್ನು ವಿಚಾರ ಮಾಡೋಣ. ಅದಕ್ಕೇನು ಅವಸರ ಇಲ್ಲ. ರಿಸರ್ವೇಷನ್ ರೂಲ್ಸ್ ಮಾಡತಕ್ಕದ್ದು under Aricle 309.

MR. SPEAKER:- We will take it up next time.

SRI KAGODU THIMMAPPA:- The Hon.Law Minister has convinced us. He explained the position of Article 309.

ಅಧ್ಯಕ್ಷರು:- ಅದನ್ನು ನೀವು ಯೋಚನೆ ಮಾಡಿ. It will come up again. We are not dispossing off. We will take up the matter next time.

ನಿಯಮ 68ರ ಮೇಲಿನ ಚರ್ಚೆ.

ಅಧ್ಯಕ್ಷರು:- 68ನೇ ವಿಧಿನಿಯಮದ ಕೆಳಗೆ ಚರ್ಚೆ ಆಗಬೇಕೆಂಬ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೆ. ಆದುದರಿಂದ ಈಗ ಕೈಗೆತ್ತಿಕೊಂಡಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:- ಮಾನ್ಯ ಸಭಾಪತಿಯವರು ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ಬಹುಶಃ ತಮಗೂ ಆಹ್ವಾನ ಬಂದಿರಬೇಕು. ಆ ಕೂಟಕ್ಕೆ ಹೋಗದೆ ಇದ್ದರೆ ಅಸೌಜನ್ಯವಾಗುತ್ತದೆ. ಅದಕ್ಕೋಸ್ಕರ ಒಂದು ಗಂಟೆ ಕಾಲ ಸಭೆಯನ್ನು ಅಡ್ಜರ್ನ್ ಮಾಡಿದರೆ ಒಳ್ಳೆಯದು.

ಶ್ರೀ ಟಿ.ಎನ್. ನರಸಿಂಹ ಮೂರ್ತಿ:- ನನಗೆ ಮೇಲ್ಮನೆಯಲ್ಲಿ ಕೆಲಸ ಇದೆ, ಆದ್ದರಿಂದ ಬೇಗ ಮುಗಿಸಿದರೆ ಒಳ್ಳೆಯದು.

ಅಧ್ಯಕ್ಷರು:- ಶುರು ಮಾಡಿ, ಅರ್ಧ ಗಂಟೆಯಲ್ಲಿ ಮುಗಿಯುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಭೋಜನ ಕೂಟಕ್ಕೆ ಹೋಗದೆ ಇದ್ದರೆ ಅಸೌಜನ್ಯವಾಗುತ್ತದೆಂದು ಅಷ್ಟೆ.

SRI T.N. NARASIMHA MURTHY:- I have to attend the Legislative Council. I leave it to the Hon.Speaker. If the Hon.Leader of the Opposition wants time, I have no objection.

ಮಾನ್ಯ ವಿರೋಧ ಪಕ್ಷದ ನಾಯಕರು ಸಲಹೆ ಮಾಡಿರುವುದರಿಂದ ನನ್ನದೇನು ಆಕ್ಷೇಪಣೆ ಇಲ್ಲ.

ಅಧ್ಯಕ್ಷರು:- ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಾಟಾಳ್ ನಾಗರಾಜ್ ಅವರು ಹಾಗೂ ನಮ್ಮ ಅಂಡರ್‌ಸ್ಟ್ಯಾಂಡಿಂಗ್ ಏನಿತ್ತು ಎಂದರೆ ಇವತ್ತು ಮಧ್ಯಾಹ್ನ ಒಂದು ಗಂಟೆಗೆ ಸಭೆ ಮುಗಿಸಬೇಕು ಎಂದು. ಆದುದರಿಂದ ಕುಳಿತುಕೊಂಡು ಮುಗಿಸೋಣ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಕಾರ್ಯಾಲಯದಲ್ಲಿ ಮಾತನಾಡಿದಾಗ ಒಂದು ಘಂಟೆಯಲ್ಲಿ ಮುಗಿಯಬೇಕು ಎಂದು ಹೇಳಿದ್ದು ನಿಜ. ಆದರೆ ಅನೇಕ ವಿಚಾರಗಳು ಬಂದು ಈಗ ಒಂದೂವರೆ ಘಂಟೆ ಆಯಿತು.

ಅಧ್ಯಕ್ಷರು:- ಇವತ್ತು ಈ ಸಭೆ ನಡೆಯುವ ಪ್ರಶ್ನೆಯೇ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು:- ಸರ್ಕಾರಕ್ಕೆ ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಸರ್ಕಾರ ನಮ್ಮ ಮಾತಿಗೆ ಬೆಲೆ ಕೊಟ್ಟಿದೆ. ಸಂತೋಷ. ಅದಕ್ಕಾಗಿ ಅಭಿನಂದನೆ ಸಲ್ಲಿಸುತ್ತೇವೆ.

ಅಧ್ಯಕ್ಷರು:- ಈಗ ಸಿಂಧ್ಯ ಅವರು ಪ್ರಾರಂಭ ಮಾಡಲಿ, ನೋಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದೊಂದಿಲ್ಲದ್ದಿದ್ದರೆ ನಾನು ಹೇಳುತ್ತಾ ಇರಲಿಲ್ಲ. ತಾವು ಭೋಜನಕ್ಕೆ ಆಹ್ವಾನಿಸಿದರೆ ನಾವು ಬರುವುದಿಲ್ಲ ಎಂದು ಹೇಗೆ ಹೇಳುವುದು?

ನನ್ನ ಕಷ್ಟ ಅದು. ಬೇರೆ ಏನೂ ಕಷ್ಟ ಇಲ್ಲ. ನಾನು ಮಾತನಾಡಲು ರೆಡಿಯಾಗಿದ್ದೇನೆ. At least, if you can give us half an-hour or 45 minutes, we will come back. I think, the Hon.Minister for Law & Parliamentary Affairs has also been invited for lunch.

MR. SPEAKER:- He is also one of the invitees.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ನಗರಾಭಿವೃದ್ಧಿ ಸಚಿವರು. he has to be present on an important discussion to take place in the other House. Afterall, we are meeting again in August. This has been discussed already in the other House very exhaustively. If the Hon.Leader of the Corporation agrees, we could take it up in the next session. ತಾವು ಹೇಳಿದಿರಿ 9-30ಕ್ಕೆ ಕುಳಿತುಕೊಂಡು ಒಂದು ಘಂಟೆಯೊಳಗೆ ಮುಗಿಸೋಣ ಎಂದು. ಅದಕ್ಕೆ ನಾವು ಒಪ್ಪಿದ್ದೆವು. ಇಲ್ಲದೇ ಹೋದರೆ ನಿನ್ನೆಯೇ ಮುಗಿಯುತ್ತಿತ್ತು. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದಕ್ಕೆ ಈಗ ಕುಳಿತಿದ್ದೇವೆ.

SRI T.N. NARASIMHA MURTHY:- I have already made a Statement on calling attention notice on the said subject exhaustively. Inspite of this, if the Hon.Leader of the Opposition wants to discuss it, it is left to the Chair and to the House.

ಶ್ರೀ ಡಿ.ಬಿ. ಚಂದ್ರೇಗೌಡ:- ಹಾಫ್ ಹಾರ್ಟೆಡ್ ಏನು ಇಲ್ಲ. ಚರ್ಚೆಯಾಗಬೇಕು.

ಅಧ್ಯಕ್ಷರು:- ಮುಂದಿನ ಸೆಷನ್‌ನಲ್ಲಿ ತೆಗೆದುಕೊಳ್ಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ:- ಪ್ರಶ್ನೆ ಇರುವುದು ಈಗಲೋ ಆಥವಾ ಇನ್ನೊಂದು ಘಂಟೆ ಮೇಲೋ ಎಂದು. ಆದರೆ ಅವರು ಹೇಳುವುದು ಇನ್ನು ಒಂದು ತಿಂಗಳ ಮೇಲೆ.

ಅಧ್ಯಕ್ಷರು:- ಅವರು ಅಲ್ಲಿ ಹೋಗಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವೂ ದಯಮಾಡಿಸಬೇಕು.

ಅಧ್ಯಕ್ಷರು:- ಲಂಚ್‌ಗಲ್ಲ. My only concern is, the Minister who is incharge of this Department has to be present in the other House during discussion on an important subject.

ಶ್ರೀ ಬಿ.ಹೆಚ್. ಬನ್ನಿಕೋಡ್:– ರೂಲ್ 68ರ ಪ್ರಕಾರ ಕೊಟ್ಟಿರುವ ವಿಷಯವನ್ನು ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡುವುದು ಆದು ಅಷ್ಟು ಸರಿ ಕಾಣುವುದಿಲ್ಲ. ಆ ರೀತಿ ಮಾಡುವ ಹಾಗಿದ್ದರೆ ಈಗ ಇದನ್ನು ತರುವ ಆವಶ್ಯಕತೆಯೇ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮತ್ತೊಮ್ಮೆ ತಮಗೆ ಮನವಿ ಮಾಡುತ್ತೇನೆ ಇದುವರೆಗೂ ನಡೆದುಕೊಂಡು ಬಂದಿದೆ. ತಾವೇ ಒಂದೂವರೆ ಆದತಕ್ಷಣ ಎದ್ದುನಿಂತು ಈ ಸಭೆಯನ್ನು ಮುಂದೂಡಿದ್ದೇನೆ ಎಂದು ಹೇಳುತ್ತಿದ್ದೀರಿ. ಆ ಸೌಜನ್ಯವನ್ನು ಇವತ್ತು ಸಹ ಆದರಲ್ಲಿಯೂ ಕೊನೇ ದಿವಸ ದಯಮಾಡಿ ತೋರಿಸಿ.

ಅಧ್ಯಕ್ಷರು:- ಡಿಬೇಟ್ ಆಗುವಾಗ ಅವರು ಇರಬೇಕಲ್ಲ.

SRI D.B. CHANDRE GOWDA:- At any rate, it will be not less than two hours.

ಶ್ರೀ ಟಿ.ಎನ್. ನರಸಿಂಹ ಮೂರ್ತಿ:– ತಾವು ಸ್ಟಾರ್ಟ್ ಮಾಡಿ ಸ್ವಾಮಿ. ಮ್ಯಾಟರ್ ಕ್ಲೋಸ್ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:– ಅಂತಿಮವಾಗುತ್ತದೆ. ಈಗ ಪ್ರಾರಂಭವಾದರೆ ಎಷ್ಟು ಹೊತ್ತಿಗೆ ಮುಗಿಯುತ್ತದೆ ಗೊತ್ತಾ? ಗೌಡರು ಬೇಗ ಮುಗಿಸುತ್ತಾರಾ? ಅವರು ಒಂದು ಘಂಟೆ ತೆಗೆದುಕೊಳ್ಳುತ್ತಾರೆ. ಬೇಕಾದರೆ ಕುಳಿತುಕೊಳ್ಳೋಣ. ಆದರೆ ಎರಡೂವರೆ ಘಂಟೆಯೊಳಗೆ ಮುಗಿಯುವುದಿಲ್ಲ ಸ್ವಾಮಿ.

ಶ್ರೀ ಟಿ.ಎನ್. ನರಸಿಂಹ ಮೂರ್ತಿ:– ಸ್ಟಾರ್ಟ್ ಮಾಡಿ ಸ್ವಾಮಿ;

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ತಮ್ಮ ಮನವಿಗೆ ಬೆಲೆ ಸಿಗುತ್ತದೆಂದು ಅಂದುಕೊಂಡಿದ್ದೇನೆ. ತಾವು ಮನವಿ ಮಾಡಿ ಸ್ವಾಮಿ.

ಅಧ್ಯಕ್ಷರು: ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಆಲ್ಲಿಗೆ ಎಷ್ಟು ಹೊತ್ತಿಗೆ ಹೋಗಬೇಕು.

SRI T.N. NARASIMHA MURTHY:- I have to go now. Now, straightway let him start discussion. I will answer and go. ಇದನ್ನು ಮುಗಿಸಿಬಿಡಿಲಿ.

ಶ್ರೀ ವಾಟಾಳ್ ನಾಗರಾಜ್:– ಸ್ವಾಮಿ, ಆಲ್ಲಿ ಕುಲದೀಪ್‌ಸಿಂಗ್ ವರದಿ ಬಗ್ಗೆ ಚರ್ಚೆ ಆಗುತ್ತಿದೆ. ಇದು ನಾಲ್ಕೂವರೆವರೆಗೆ ಹೋಗುತ್ತದೆ. ಆಲ್ಲಿಯವರೆಗೆ ಎಳೆಯುತ್ತದೆ. ಆಲ್ಲಿಯವರೆಗೆ ಏನು ಮಾಡೋಣ ಹೇಳಿ. ಸಿಂಧ್ಯ ಅವರು ಮಾತನಾಡುತ್ತಾರೆ. ಏಕಾಂತಯ್ಯನವರು ಮಾತನಾಡುತ್ತಾರೆ. ಪ್ರಾಮಾಣಿಕವಾಗಿ ಹೇಳುವುದಾದರೆ ನಾಲ್ಕೂವರೆ ಐದು ಘಂಟೆ ಆಗುತ್ತದೆ. ನಮ್ಮ ಪ್ರಶ್ನೆಯನ್ನು ನೀವು ಮೂರು ಜನ ಮಂತ್ರಿಗಳಿದ್ದರೂ ಕೇಳುತ್ತಿಲ್ಲವಲ್ಲ. ಒಪ್ಪಿ ಸ್ವಾಮಿ. ಎಲ್ಲರೂ ಹೋಗಿ ಊಟ ಮಾಡೋಣ.

ಅಧ್ಯಕ್ಷರು: ಈಗ ಸದನ ಮುಂದುವರೆದು ಪುನಃ ಎರಡೂ ಕಾಲು ಘಂಟೆಗೆ ಸೇರುತ್ತದೆ.